




ರವೀಂದ್ರನಾಥ್ ಟ್ಯಾಗೋರ್

ಚಿತ್ರಗಳು: ಸುನೈನಾ ಕೊಯೆಲ್ಹೋ

# ಮೋಡಗಳು ಮತ್ತು ಅಲೆಗಳು

ಕಥಾದಿಂದ ಒಂದು 300ಎಂ ಥಿಂಕ್‌ಬುಕ್



ಅಮ್ಮ,
ಮೋಡಗಳಲ್ಲಿ ವಾಸಿಸುವ ಜನ ನನ್ನನ್ನು
ಕರೆಯುತ್ತಾರೆ...


"ಬಾ!
ನಾವು ಎದ್ದಾಗಿನಿಂದ ದಿನ ಮುಗಿವವರೆಗೆ
ಆಡುತ್ತೇವೆ. ನಾವು ಬಂಗಾರದ ಬೆಳಗು
ಮತ್ತು ಬೆಳ್ಳಿ ಚಂದ್ರನೊಂದಿಗೆ
ಆಡುತ್ತೇವೆ."
ನಾನು ಕೇಳುತ್ತೇನೆ,
"ಆದರೆ ನಾನು ನಿಮ್ಮ ಹತ್ತಿರ
ಬರುವುದು ಹೇಗೆ?"



ಅವರು ಉತ್ತರಿಸುತ್ತಾರೆ,
"ಭೂಮಿಯ ಅಂಚಿಗೆ ಬಾ, ನಿನ್ನ
ಕೈಗಳನ್ನು ಆಕಾಶಕ್ಕೆ ಮೇಲೆತ್ತು.
ನೀನು ಮೋಡಗಳ ಒಳಗೆ
ಬರುತ್ತೀಯ."



ನಾನು ಹೇಳುತ್ತೇನೆ - "ನನ್ನ ಅಮ್ಮ ಮನೆಯಲ್ಲಿ ನನಗಾಗಿ ಕಾಯುತ್ತಿದ್ದಾಳೆ. ನಾನು ಅವಳನ್ನು ಬಿಟ್ಟು ಬರುವುದು ಹೇಗೆ?" ಆಗ ಅವರು ನಗುತ್ತಾರೆ ಮತ್ತು ತೇಲಿ ಹೋಗುತ್ತಾರೆ.

ಆದರೆ ಅದಕ್ಕಿಂತ ಒಳ್ಳೆಯ ಆಟ ನನಗೆ
ಗೊತ್ತು, ಅಮ್ಮ. ನಾನು ಮೋಡವಾಗುತ್ತೇನೆ
ಮತ್ತು ನೀನು ಚಂದ್ರನಾಗು.

ನಾನು ನಿನ್ನನ್ನು ನನ್ನ ಎರಡೂ ಕೈಗಳಿಂದ
ಮುಚ್ಚುತ್ತೇನೆ. ನಮ್ಮ ಮನೆಯ
ಛಾವಣಿಯೇ ನೀಲಿ ಆಕಾಶವಾಗುತ್ತದೆ.



ಅಲೆಗಳಲ್ಲಿ ವಾಸಿಸುವ ಜನರು ನನ್ನನ್ನು ಕರೆಯುತ್ತಾರೆ... "ಸೇರಿಕೋ! ನಾವು ಬೆಳಗಿನಿಂದ ರಾತ್ರಿಯವರೆಗೆ ಹಾಡುತ್ತೇವೆ; ನಾವು ಪ್ರಯಾಣಿಸುತ್ತಲೇ ಇರುತ್ತೇವೆ ಮತ್ತು ನಾವೆಲ್ಲಿಗೆ ಹೋಗುತ್ತೇವೆ ಎಂದು ನಮಗೇ ಗೊತ್ತಿಲ್ಲ."





ನಾನು ಕೇಳುತ್ತೇನೆ,
"ಆದರೆ ನಾನು ನಿಮ್ಮನ್ನು ಸೇರುವುದು ಹೇಗೆ?"

ಅವರು ನನಗೆ ಹೇಳುತ್ತಾರೆ, "ಕಡಲ ತೀರದ ಅಂಚಿಗೆ
ಬಾ ಮತ್ತು ಕಣ್ಣನ್ನು ಗಟ್ಟಿಯಾಗಿ ಮುಚ್ಚಿ ನಿಲ್ಲು.

ನೀನು ಅಲೆಗಳ ಮೇಲೆ ಸಾಗುತ್ತೀಯ."





ನಾನು ಹೇಳುತ್ತೇನೆ, "ಸಂಜೆಗೆ ನಾನು ಮನೆಯಲ್ಲಿರಬೇಕು ಎಂದು ನನ್ನ ಅಮ್ಮ ಯಾವಾಗಲೂ ಬಯಸುತ್ತಾಳೆ. ನಾನು ಅವಳನ್ನು ಬಿಟ್ಟು ಹೇಗೆ ಹೋಗಲಿ?"

ಅವರು ನಗುತ್ತಾರೆ, ನೃತ್ಯ ಮಾಡುತ್ತಾರೆ ಮತ್ತು ಸಾಗಿ ಹೋಗುತ್ತಾರೆ.




ಆದರೆ ಅದಕ್ಕಿಂತ ಉತ್ತಮವಾದ ಆಟ
ನನಗೆ ಗೊತ್ತು.

ನಾನು ಅಲೆಯಾಗುತ್ತೇನೆ ಮತ್ತು ನೀನು
ಅಪರಿಚಿತ ಸಮುದ್ರ ತೀರವಾಗುತ್ತೀಯ.
ನಾನು ಉರುಳುತ್ತಲೇ ಇರುತ್ತೇನೆ ಮತ್ತು
ನಗುತ್ತಾ ನಿನ್ನ ಮಡಿಲಿಗೆ ಬರುತ್ತೇನೆ.



ಮತ್ತು ನಾವಿಬ್ಬರೂ ಎಲ್ಲಿದ್ದೇವೆ
ಎಂದು ಜಗತ್ತಿನಲ್ಲಿ ಯಾರಿಗೂ
ತಿಳಿಯುವುದಿಲ್ಲ!

# ರವೀಂದ್ರನಾಥ್ ಟ್ಯಾಗೋರ್ ಅವರ ವಂಶವೃಕ್ಷ



ರವೀಂದ್ರನಾಥ್ ಟ್ಯಾಗೋರರು ಕೋಲ್ಕಾತಾದಲ್ಲಿ ಮೇ 7, 1861ರಂದು ಜನಿಸಿದರು. ಅವರನ್ನು ಪ್ರೀತಿಯಿಂದ ಗುರುದೇವ ಎಂದು ಕರೆಯಲಾಗುತ್ತದೆ. ಅವರ ತಂದೆ ದೇವೇಂದ್ರನಾಥ್ ಟ್ಯಾಗೋರ್ ಸಂಸ್ಕೃತ ವಿದ್ವಾಂಸರು. ಗುರುದೇವರ ಆರಂಭಿಕ ಶಿಕ್ಷಣ ಮನೆಯಲ್ಲಿಯೇ ನಡೆಯಿತು. ಶಾಲೆಯಲ್ಲಿ, ಇತರರು ತಮ್ಮ ಪಾಠಗಳನ್ನು ಕಲಿಯುತ್ತಿದ್ದರೆ, ಗುರುದೇವ ಕನಸುಗಳ ರೋಚಕ ಜಗತ್ತಿಗೆ ಜಾರಿಕೊಳ್ಳುತ್ತಿದ್ದರು. ಏಳನೇ ವಯಸ್ಸಿನಲ್ಲಿ ಅವರು ತಮ್ಮ ಮೊದಲ ಕವಿತೆಯನ್ನು ಬರೆದರು. ಹದಿನೇಳನೇ ವಯಸ್ಸಿನಲ್ಲಿ, ಅವರ ಮೊದಲ ಕವನ ಸಂಕಲನ ಪ್ರಕಟವಾಯಿತು. ಭಾವಪೂರ್ಣವಾದ ಅವರ ಮಾಂತ್ರಿಕ ಬರವಣಿಗೆ, ಆಳವಾದ ಭಾವನೆಗಳನ್ನು ಮೂಡಿಸುತ್ತವೆ ಮತ್ತು ಅವರು ಪದಗಳನ್ನು ಸರಾಗವಾಗಿ ಹೆಣೆಯುವ ರೀತಿ ಅಚ್ಚರಿ ಮೂಡಿಸುತ್ತದೆ. ಅವರ ಪ್ರಸಿದ್ಧ ಕವನಗಳ ಸಂಕಲನ ಗೀತಾಂಜಲಿಗಾಗಿ ಅವರಿಗೆ 1913ರಲ್ಲಿ ಸಾಹಿತ್ಯದ ನೊಬೆಲ್ ಪ್ರಶಸ್ತಿ ನೀಡಲಾಯಿತು.

ಸುನೈನಾ ಕೊಯೆಲ್ಹೋ ಅವರು ಅಹ್ಮದಾಬಾದ್‌ನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್‌ನಲ್ಲಿ ಆನಿಮೇಷನ್ ಅಧ್ಯಯನ ಮಾಡಿದ್ದು ಈಗ ಮುಂಬಯಿನಲ್ಲಿ ವಾಸಿಸುತ್ತಿದ್ದಾರೆ. ಅವರು ದೂರದರ್ಶನಕ್ಕಾಗಿ ಅನಿಮೇಷನ್ ಮಾಡುತ್ತಾರೆ. ಚಿತ್ರ ಬಿಡಿಸದೆ ಇದ್ದಾಗ, ಮಲಗಿ ಕನಸು ಕಾಣುತ್ತಾರೆ, ಅಡುಗೆ ಮಾಡುತ್ತಾರೆ ಇಲ್ಲವೇ ಸಮುದ್ರ ತೀರದಲ್ಲಿ ಕುಳಿತು ಸಮುದ್ರ ಇನ್ನಷ್ಟು ಸ್ವಚ್ಛವಾಗಿದ್ದರೆ ಈಜಬಹುದಿತ್ತು ಎಂದುಕೊಳ್ಳುತ್ತಿರುತ್ತಾರೆ.

ಕಥಾ ಒಂದು ಪ್ರಸಿದ್ಧಲಾಭರಹಿತ ಸಂಸ್ಥೆಯಾಗಿದ್ದು (www.katha.org), ಅಕ್ಷರಜ್ಞಾನದಿಂದಸಾಹಿತ್ಯದವರೆಗಿನ ಎಲ್ಲ ಕ್ಷೇತ್ರಗಳಲ್ಲಿ 1988ರಿಂದ ಕೆಲಸ ಮಾಡುತ್ತಿದೆ. ಸುಮಾರು 30 ವರ್ಷಗಳ ನಮ್ಮ ಅನುಭವವು ಬಡ ಮಕ್ಕಳ ಪುಸ್ತಕಮತ್ತು ಶಿಕ್ಷಣದ ಕ್ಷೇತ್ರದಲ್ಲಿದೆ.

"ಭಾರತದ ಕಿರೀಟದಲ್ಲೊಂದು ಶಿಕ್ಷಣದ ಆಭರಣ." - ನವೋಯುಕಿ ಶಿನೋಹರಾ, ಉಪ ವ್ಯವಸ್ಥಾಪಕ ನಿರ್ದೇಶಕರು, ಐಎಂಎಫ್

"ನಗರಗಳಲ್ಲಿನ ಸಾಮಾನ್ಯ ಮತ್ತು ಅನಿರೀಕ್ಷಿತ ದುಃಖಗಳೊಡನೆ ಸೆಣಸಾಡುವ ಜಗತ್ತಿನ ಎಲ್ಲ ಸೃಜನಶೀಲ ಯೋಜನೆಗಳಿಗೆ ಕಥಾ ಒಂದು ಉದಾಹರಣೆಯಾಗಿದೆ." - ಚಾರ್ಲ್ಸ್ ಲ್ಯಾಂಡ್ರಿ, ದಿ ಆರ್ಟ್ ಆಫ್ ಸಿಟಿ ಮೇಕಿಂಗ್

“ಕಥಾ ಮಕ್ಕಳ ಕುರಿತು ನಿಜವಾದ ಕಾಳಜಿ ಇಟ್ಟುಕೊಂಡಿದೆ. ಅದಕ್ಕಾಗಿಯೇ ಅದು ... ಮಕ್ಕಳಿಗಾಗಿ ಅಷ್ಟೊಂದು ಸುಂದರವಾದ ಚಿತ್ರದ ಪುಸ್ತಕಗಳನ್ನು ರೂಪಿಸುತ್ತದೆ." - ಟೈಮ್ ಔಟ್

“ಮಕ್ಕಳು [ತಮ್ಮ ಪುಸ್ತಕಗಳಲ್ಲಿ] ಮಾಡುವಂತೆಯೇ ತಮ್ಮ ಸಮುದಾಯಗಳಲ್ಲಿ ಮುಂದುವರೆಯುವಂತಹ ಮತ್ತು ನಿಜವಾದ ಬದಲಾವಣೆ ತರಬಹುದು ಎಂಬ ಭಾವನೆ ಕಥಾದ ಕೆಲಸಕ್ಕೆ ಚಾಲನೆ ನೀಡುತ್ತದೆ.” - ಪೇಪರ್‌ಟೈಗರ್ಸ್

ಈ ಆವೃತ್ತಿ ಮೊದಲ ಬಾರಿಗೆ 2021ರಲ್ಲಿ ಪ್ರಕಟವಾಯಿತು
ಕಾಪಿರೈಟ್ © ಕಥಾ, 2011, 2021
ಪಠ್ಯದಕಾಪಿರೈಟ್©ರವೀಂದ್ರನಾಥ್‌ಟ್ಯಾಗೋರ್
ಚಿತ್ರಗಳ ಕಾಪಿರೈಟ್ © ಕಥಾ
ಎ3, ಸರ್ವೋದಯ ಎನ್‌ಕ್ಲೇವ್, ಶ್ರೀ ಅರವಿಂದೋ ಮಾರ್ಗ, ನವದೆಹಲಿ 110 017
ದೂರವಾಣಿ: 91-11 4141 6600 . 4141 6610
ಇ-ಮೇಲ್: editors@katha.org, ವೆಬ್‌ಸೈಟ್: www.katha.org
ಐಎಸ್‌ಬಿಎನ್ 978-93-82454-65-6

ನಮ್ಮ ಧ್ಯೇಯ: ಪ್ರತಿಯೊಂದು ಮಗುವೂ ಚೆನ್ನಾಗಿ ಓದಬೇಕು, ಖುಷಿಗಾಗಿ ಓದಬೇಕು!

ಕಥಾ ಎಂಬುದು 1988ರಲ್ಲಿ ಪ್ರಾರಂಭವಾದ ಒಂದು ನೋಂದಾಯಿತ, ಲಾಭರಹಿತ ಸಂಸ್ಥೆ. ನಾವು ಅಕ್ಷರಜ್ಞಾನದಿಂದ ಸಾಹಿತ್ಯದವರೆಗಿನ ಎಲ್ಲ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತೇವೆ. ಮಕ್ಕಳು ಮತ್ತು ವಯಸ್ಕರಲ್ಲಿ ಓದುವ ಸಂತೋಷವನ್ನು ಹೆಚ್ಚಿಸುವ ಉದ್ದೇಶ ಇಟ್ಟುಕೊಂಡಿರುವ ನಾವು, ಗುಣಮಟ್ಟದ ಪುಸ್ತಕಗಳು ಮತ್ತು ಸಹಾಯದ ಮೂಲಕ 1,00,000ಕ್ಕೂ ಹೆಚ್ಚು ಬಡ ಮಕ್ಕಳನ್ನು ಗ್ರೇಡ್ ಮಟ್ಟದ ಓದುವಿಕೆಗೆ ಕರೆತರಲು ಅವರೊಂದಿಗೆ ಕೆಲಸ ಮಾಡುತ್ತೇವೆ.

ಎಲ್ಲ ಹಕ್ಕುಗಳನ್ನೂ ಕಾಯ್ದಿರಿಸಲಾಗಿದೆ. ಈ ಪುಸ್ತಕದ ಯಾವುದೇ ಭಾಗವನ್ನು ಪ್ರಕಾಶಕರ ಲಿಖಿತ ಅನುಮತಿಯಿಲ್ಲದೆ ಯಾವುದೇ ರೂಪದಲ್ಲಿ ಮರುಬಳಕೆ ಮಾಡುವಂತಿಲ್ಲ ಅಥವಾ ಬಳಸಿಕೊಳ್ಳುವಂತಿಲ್ಲ.

ಈ ಪುಸ್ತಕಗಳ ಮಾರಾಟದಿಂದ ಬರುವ ಒಟ್ಟು ಆದಾಯದ 10% ಮೊತ್ತವು, ಸವಲತ್ತುಗಳಿಲ್ಲದ ಮಕ್ಕಳ ಓದುವಿಕೆ ಮತ್ತು ಜೀವನ ಪರ್ಯಂತದ ಕಲಿಕೆಯ ಕಾರ್ಯಕ್ರಮಗಳನ್ನು ಬೆಂಬಲಿಸುತ್ತದೆ.






ಐ ಲವ್ ರೀಡಿಂಗ್ ಲೈಬ್ರರಿ ಒಂದು ಅನನ್ಯ ಪುಸ್ತಕಗಳ ಸರಣಿಯಾಗಿದ್ದು, ಅದು ಹೊಸ ಮತ್ತು ಸಂಕೋಚ ಸ್ವಭಾವದ ಓದುಗರನ್ನು ಸುಲಭವಾಗಿ ಓದುವಂತೆ ಮಾಡುತ್ತದೆ. ಓದಿನ ವಿಭಿನ್ನ ಹಂತದಲ್ಲಿರುವ ಮಕ್ಕಳ ಕಲಿಕೆಯ ಅಗತ್ಯಗಳಿಗೆ ಸರಿಹೊಂದುವಂತೆ ಉತ್ತಮ ಗುಣಮಟ್ಟದ ವಿಷಯ ಮತ್ತು ವಿನ್ಯಾಸದೊಂದಿಗೆ, ಇದು ಭಾರತ ಮತ್ತು ಪ್ರಪಂಚದ ಅತ್ಯುತ್ತಮ ಸಾಹಿತ್ಯಕ ರಚನೆಗಳು ಮತ್ತು ಕಲಾಕೃತಿಗಳನ್ನು ಒಟ್ಟಿಗೆ ತರುತ್ತದೆ. ನಮ್ಮ ಪುಸ್ತಕಗಳು ಗೀತಾ ಧರ್ಮರಾಜನ್‌ರ ಅನನ್ಯ ಶಿಕ್ಷಣ ಮಾದರಿಯಾದ “ಸ್ಟೋರಿಪೆಡಗಾಜಿTM” ಯ ಸ್ವರೂಪ ಪಡೆದಿವೆ, ಈ ಮಾದರಿಯುವಿಶೇಷವಾಗಿ ಮೊದಲ ತಲೆಮಾರಿನ ಓದುಗರಲ್ಲಿ ಓದಿನ ಸಂತೋಷವನ್ನು ಉತ್ತೇಜಿಸುತ್ತದೆ ಹಾಗೂ ಮಗುವನ್ನು ಬಿಗ್ ಐಡಿಯಾಸ್ ಮತ್ತು TA-DAAಗಳ (ಥಿಂಕ್, ಆಸ್ಕ್, ಡಿಸ್ಕಸ್, ಆಕ್ಟ್ ಹಾಗೂ ಅಚೀವ್) ಆಕರ್ಷಕ ಜಗತ್ತಿಗೆ ಕರೆದೊಯ್ಯುತ್ತದೆ!

ಕಥಾದ ಹೋಲಿಸ್ಟಿಕ್ ಅರ್ಲಿ ಲರ್ನಿಂಗ್ (KHEL!) ಲ್ಯಾಬ್ ಸರ್ಕಾರಿ, ಲಾಭೋದ್ದೇಶವಿಲ್ಲದ ಮತ್ತು ಖಾಸಗಿ ಶಾಲೆಗಳಲ್ಲಿನ ಶಿಕ್ಷಕರಿಗೆ ಕಾರ್ಯಾಗಾರಗಳನ್ನು ನಡೆಸುತ್ತದೆ. ಆನ್‌ಲೈನ್ ಸೆಶನ್‌ಗಳಿಂದ ಬೆಂಬಲಿತವಾದ ಈ F2F (ಫೇಸ್-ಟು-ಫೇಸ್) ಕಾರ್ಯಾಗಾರಗಳು ಶಿಕ್ಷಕರು, ಶಾಲಾ ಆಡಳಿತಾಧಿಕಾರಿಗಳು ಹಾಗೂ ಸ್ವಯಂಸೇವಕರಿಗೆ "ರೀಡಿಂಗ್ ಟೀಚರ್ಸ್ ಪ್ರಮಾಣಪತ್ರ"ವನ್ನು ದೊರಕಿಸಿಕೊಡುತ್ತವೆ. ಇನ್ನಷ್ಟು ತಿಳಿದುಕೊಳ್ಳಲು, 300m@katha.org ಸಂಪರ್ಕಿಸಿ

ಈ ಎಲ್ಲ ಐಎಲ್‌ಆರ್ ಪುಸ್ತಕಗಳನ್ನು ಇಂದೇ ಖರೀದಿಸಿ

ಸಂತೋಷ ಮತ್ತು ಅರ್ಥಕ್ಕಾಗಿ ಓದಿ

































FOR OUR BOOKS

www.books.katha.org

"ಕಥೆಗಳ ಮೂಲಕ ಭಾರತದ ಬಹುಸಂಸ್ಕೃತಿಯ ಅನನ್ಯತೆ."
- ದ ಪಯನಿಯರ್


ಮಕ್ಕಳಿಗಾಗಿ
ಒಂದು ಕಥಾ ಪುಸ್ತಕ
ISBN 978-93-88284-81-3
9 789388 284813
www.katha.org
` xxx